ಮೈಸೂರ ಗೆಜೆಟ್

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜೂನ್ ತಾ|| 6, ಸನ್ 1885.

ಗಮನ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

1ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್ಗೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್ ನಾವಮಾ.

ಶಿವ್ಮೊ 13ನೇ ಮೇ 1885.

ನಂ. 947 G—ಫಸ್ಟ್ ಕ್ಲಾಸ್ ರೆಸಿಡೆಂಟರಾದ ಮತ್ತು ಮೈಸೂರು ಕೀಮೆಯ ರೆಸಿಡೆಂಟ್ ವ ಕೊಡಗು ಜೀಫ್ ಕಮ್ಮಿಷನರ್ ಮೇ|| ಜೆ. ಬಿ. ಲಾಯಲ್ ಸಿ. ಎಸ್. ಯವರಿಗೆ, ಸಿವಿಲ್ ಲೀವ್ ಕೋಡಿನ 50ನೇ ಸೆಕ್ಷನ್ ಅನುಸರಿಸಿ 1885ನೇ ಇಸವಿ ಮೇ 26ನೇ ತಾರೀಖು ಲಾಗಾಯಿತು 9 ತಿಂಗಳ ವರಿಗೆ ಸ್ವಂತ ಕೆಲಸದ ಬಗ್ಗೆ ಯೂರೋಪಿಗೆ ಫರಲೋ ರಜಾ ಕೊಡಟ್ಟಿಟ್ಟಿರುತ್ತೆ.

ಶಿಮ್ಲಾ 15ನೇ ಮೇ 1885.

ನಂ. 975. G.—ಮೆಸ್ಟರ್ ಜೆ. ಬಿ. ಲಯಲ್ ಸಿ. ಎಸ್. ಯವರು ಫರ್ಲೋ ರಜಾದ ಮೇಲೆ ಗೈರ್ ಹಾಜರ್ ಇರುವಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿಗೆ, ಸೆಕೆಂಡ್ ಕ್ಲಾಸ್ ರೇಸೀಡೆಂಟ್ ಮತ್ತು ನೇಪಾಳದ ರೆಸೀಡೆಂಟರಾದ ಮೇ|| ಕೆ. ಇ. ಆರ್. ಗರಡಲ್‌ಸ್ಟನ್ ಸಿ. ಎಸ್. ಯವರು, ಫಸ್ಟ್‌ಕ್ಲಾಸ್ ರೆಸೀಡೆಂಟ್ ಮತ್ತು ಮೈಸೂರು ಕೀಮೆಯ ರೆಸೀಡೆಂಟ್ ವ ಕೊಡಗು ಜೀಫ್ ಕಮ್ಮಿಷನರಾಗಿ, ಅವರು ಚಾರ್ಜ್ ವಹಿಸಿದ ತಾರೀಖು ಲಾಗಾಯತು, ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಹೆಚ್. ಎಂ. ಡರ್ಯಾಡ್,
ಗವರ್ನಮೆಂಟ್ ಆಫ್ ಇಂಡಿಯ ಸೆಕ್ರಟೇರಿ.

ಮೈಸೂರು ರೆವಿನ್ಯೂ ಸರ್ವೇ ಮತ್ತು ಸೆಟಿಲ್‌ಮೆಂಟ್ ಇಲಾಖಾ.

ನಂಬರ್ 180. ತಾರೀಖು 1ನೇ ಜೂನ್ 1885.

ಇದರಿಂದ ಸಮಸ್ತ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಲೇಟ್ ದೇವನಹಳ್ಳಿ ತಾಲ್ಲೂಕಿಗೆ ಕೀರಿದ ಈ ಕೆಳಗೆ ನಮೂದಾಗುವ ಸರಕಾರಿ ಗ್ರಾಮಗಳ ರಿವಿನ್ಯೂ ಸರ್ವೆ ಜಮಾಬಂದಿಯು ಇದೇ ತಿಂಗಳು 25ನೇ ತಾರೀಖಿಗೆ ಯಾ, ಆ ಸುಮಾರಿಗೆ ಪ್ರಾರಂಭಿಸಲ್ಪಡುತ್ತೆ.

36. ಚಿಕ್ಕಬಳ್ಳಾಪುರ ತಾಲ್ಲೂಕಿನ ಗ್ರಾಮಗಳು
32. ದೊಡ್ಡಬಳ್ಳಾಪುರ ,,
26. ಬಂಗಳೂರು ,,
2. ನೆಲಮಂಗಲ ,,

ಜೆ. ಬಿ. ಗ್ರಾಂಟ್,
ಸೂಪರಿಂಟೆಂಡೆಂಟ್ ರೈ|| ಸರ್ವೆ.

ಫಿನ್ಯಾನ್ಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಷೇಸಿನೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮುದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್‌ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇಸ್‌ವೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

ತುಮಕೂರು ಡಿಸ್ಟ್ರಿಕ್ಟ್ ಡಿ|| ಕಮ್ಮಿಷನರ್ ಕೋರ್ಟಿನಿಂದ.

ತಾರೀಖು 26ನೇ ಮೇ 1885.

ಇದರಿಂದ ಸಮಸ್ತರಿಗೂ ತಿಳಿಸುವದೇನಂದರೆ, ಡಿ|| ವ|| ಮುದ್ದಗಿರಿ ಪಾವಗಡ, ಶಿರಾ, ಗುಬ್ಬಿ ತಿಪಟೂರು, ತುಮಕೂರು ಈ ತಾಲ್ಲೂಕುಗಳಲ್ಲಿ ಸನ್ 1885—86ನೇ ಪಾರ್ಥಿವ ಸಂತ್ಸರದಲ್ಲಿ, ಸರ್ಕಾರದ ಜಮೀನಿನಲ್ಲಿ ಕುರಂಗದ ಕಲ್ಲುಗಳನ್ನ ಜವಾಯಿಸತಕ್ಕ ಹಕ್ಕನ್ನು ಆಯಾಯ ತಾಲ್ಲೂಕು ಆಮಿಲರ ರೂಬರೂಬ್ ತಾಲ್ಲೂಕು ಕಛೇರಿಯಲ್ಲಿ ಇದರಡೀಲಿ ಕಂಡ ತಾರೀಖುಗಳಲ್ಲಿ, ದಿವಿ 11 ಘಂಟೆ ಲಾಗಾಯಿತು ಹರಾಜು ಮಾಡಲಾಧೀತು.

ಷರತ್ತುಗಳು.

I. ಹರಾಜು ಖೈದಾದ ಕೂಡ್ಲೆ ಆಖೈರು ಸವಾಲುದಾರನೂ ಕೇಕಡಾ 25 ರೂಪಾಯಿ ವೇರಿಗೆ ನಗದು ಠೇವಣೀಯನ್ನು ಇಡಬೇಕು, ಹರಾಜು ದಿವ್ವಾನಾಪೆಬರಂದ ಮಂಜೂರಾದ ವಡನೆ, 15 ದಿವನದಲ್ಲಿ ಪೂರಾ ಮೊಬಲಗನ್ನು ಹಾಜರ್ಮಾಡಬೇಕು ಹಾಗೆ ಮಾಡದೆ ತಪ್ಪಿದರೆ, ಪುನಃ ಹರಾಜು ಮಾಡಲ್ಪಟ್ಟು ನಷ್ಟಬಂದ ಮೊಬಲಗಿಗೆ ಮೊದಲಿನ ಛಡಸವಾಲುದಾರನನ್ನು ಗುರಿಮಾಡಲಾಧೀತು ಮತ್ತು ಠೇವಣೀಯನ್ನು ಸರಕಾರಕ್ಕೆ ಕೀರಿಸಿಕೊಳ್ಳಲಾಧೀತು.

2. ಕುರಂಗದಕಲ್ಲುಗಳನ್ನು ತೆಗಿಯುವ ಉದ್ದಿಶ್ಯ ಭೂಮಿ ಸಾಗುವಳೀಗೆ ನಾಲಾಯಖಾಗುವಂತೆ ಮಾಡಕೂಡದೂ ಗುಂಡಿಗಳನ್ನು ಇಜಾರದಾರನೆ ಮುಚ್ಚಿಸಬೇಕು.

3. ಹಿಡುವಳಿಯಲ್ಲಿರುವ ಭೂಮಿಯಲ್ಲಿ ಕುರಂಕದ ಕಲ್ಲುಗಳನ್ನು ಹಿಡುವಳಿದಾರನ ಅನುಮತಿ ಪಡದು ತೆಗದುಕೊಳ್ಳಬೇಕು.

4. ಬಂಜರು ಭೂಮಿಗಳನ್ನು ಹುಲ್ಲುಬನ್ನಿ ಮತ್ತು ಸಾಗುವಳೀಗೆ ಕೊಡಲಾಧೀತು ಹಾಗೆ ಕೊಡೋಣಾದರಿಂದ ಕುರಂಗದ ಕಲ್ಲು ಇಜಾರೆದಾರನಿಗೆನಾದರು ನಷ್ಟವಾದರೆ ಅದಕ್ಕೆ ಸರ್ಕಾರದವರು ಜವಾಬುದಾರರಲ್ಲಾ.

5. ಹರಾಜು ಮೊಬಲಗಿನ ಮೇಲೆ ಕೇಕಡಾ 6—4—0 ರೂಪಾಯಿ ವೇರಿಗೆ ಲೋಕಲ್ ಫಂಡನ್ನು ಕೊಡಬೇಕು.

ಈ ವಿಷಯದಲ್ಲಿ ಮತ್ತೇನಾದರೂ ತಪಸೀಲು ತಿಳಿಯಬೇಕಾಗಿದ್ದರೆ, ಆಯಾ ತಾಲ್ಲೂಕು ಆಮಿಲರಿಗೆ ಬರದು ತಿಳಕ್ಕೊಳ್ಳಬಹುದು.